ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

12

ಇಲಾಖೆ / ವಿಷಯ : DEPARTMENT / SUBJECT: ತೋಟಗಾರಿಕೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 19/2/2021

ಆತ್ಮನಿರ್ಭರ ಯೋಜನೆಯಡಿ ರಾಜ್ಯಕ್ಕೆ 4525 ಕೋಟಿ ಶೇ.3 ಬಡ್ಡಿ ಸಬ್ಸಿಡಿ

# ಕೃಷಿ ಪೂರಕ ಉದ್ಯಮಕ್ಕೆ ಬಡ್ಡಿ ನೆರವು

ಯಳನಾಡು ಮಂಜು ದಾವಣಗೆರೆ
manjunath.lokanath@timesgroup.com

ಆತ್ಮ ನಿರ್ಭರ ಭಾರತ ಯೋಜನೆಯಡಿ ಕೃಷಿ, ತೋಟಗಾರಿಕೆ ಕ್ಷೇತ್ರದಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಪಡಿಸಲು ಅನುದಾನ ಒದಗಿಸಲಾಗಿದ್ದು, ಸ್ತ್ರೀ ಶಕ್ತಿ ಸಂಘಗಳು ಸೇರಿ ಕೃಷಿ ಸಹಕಾರಿ ಸಂಘಗಳು ಕೂಡ ಕೃಷಿ ಉದ್ದಿಮೆ ಸ್ಥಾಪಿಸಬಹುದಾಗಿದೆ.

ಆತ್ಮ ನಿರ್ಭರ ಭಾರತ ಯೋಜನೆಯಡಿ ಕೃಷಿ ಮೂಲ ಸೌಕರ್ಯ ನಿಧಿ ಸ್ಥಾಪಿಸಿ ಅನುದಾನ ಒದಗಿಸಲಾಗಿದೆ. ತೋಟಗಾರಿಕಾ ವಲಯದಲ್ಲಿ ಮೂಲ ಸೌಲಭ್ಯ ಕಲ್ಪಿಸುವುದರ ಜತೆ ಗ್ರಾಮೀಣ ಪ್ರದೇಶದಲ್ಲಿ ರೈತರ ಅನುಕೂಲಕ್ಕೆ ಕೋಲ್ಡ್ ಸ್ಟೋರೇಜ್, ಸಂಗ್ರಹ ಕೇಂದ್ರ, ಗೋದಾಮು, ಸಂಸ್ಕರಣಾ ಘಟಕ, ಲಾಜಿಸ್ಟಿಕ್ಸ್, ಬಯೋ ಫರ್ಟಿಲೈಸರ್ಸ್ ಇನ್ನಿತರ ಕೃಷಿ ಪೂರಕ ಘಟಕ, ಉದ್ದಿಮೆಗಳನ್ನು ಸ್ಥಾಪಿಸಲು ಈ ನಿಧಿಯಡಿ ಅವಕಾಶ ನೀಡಲಾಗಿದೆ.

ಹೋಬಳಿಗೊಂದು ಕೋಲ್ಡ್ ಸ್ಟೋರೇಜ್ ಮತ್ತು ಗೋದಾಮು ಸ್ಥಾಪನೆ ಹಲವು ವರ್ಷಗಳ ಬೇಡಿಕೆಯಾಗಿದ್ದು, ಇದನ್ನು ಈಡೇರಿಸಿಕೊಳ್ಳಲು ಆತ್ಮ ನಿರ್ಭರ ನೆರವಾಗಲಿದೆ. ಬೆಲೆ ಪಾತಾಳಕ್ಕೆ ಕುಸಿದರೆ ಬೆಳೆ ಕೆಡದಂತೆ ಸಂಗ್ರಹಿಸಿ ಬೆಲೆ ಬಂದಾಗ ರೈತರು ಮಾರಾಟ ಮಾಡಲು ಅನುಕೂಲ ಆಗಲಿದೆ.

**ರಾಜ್ಯಕ್ಕೆ 4525 ಕೋಟಿ ಅನುದಾನ:** ಇದಕ್ಕಾಗಿ ಕೇಂದ್ರ ಸರಕಾರ ಒಂದು ಲಕ್ಷ ಕೋಟಿ ರೂ. ಸಾಲದ ಯೋಜನೆ ರೂಪಿಸಿದ್ದು, ಸಾಲ ನೀಡುವ ಹಲವು ಹಣಕಾಸು ಸಂಸ್ಥೆಗಳ ಜತೆಗೆ ಸರಕಾರ ಒಪ್ಪಂದ ಮಾಡಿಕೊಂಡಿದೆ. ಇದರಲ್ಲಿ ಕರ್ನಾಟಕಕ್ಕೆ 4525 ಕೋಟಿ ರೂ. ಅನುದಾನ ಒದಗಿಸಲಾಗಿದೆ. ರೈತರ ಉತ್ಪನ್ನಗಳನ್ನು ಉಪ ಉತ್ಪನ್ನಗಳನ್ನಾಗಿ ಮಾಡಿ ಮೌಲ್ಯ ವರ್ಧನೆ ಮಾಡುವುದರಿಂದ ರೈತರಿಗೆ ಹೆಚ್ಚಿನ ಬೆಲೆ ಸಿಗಲಿದೆ ಎಂದು ಸರಕಾರ ಪ್ರತಿಪಾದಿಸಿದೆ.

ಕೃಷಿ ವಲಯದಲ್ಲಿ ಮೂಲ ಸೌಕರ್ಯ ಕಲ್ಪಿಸುವ ಉದ್ದಿಮೆ ಆರಂಭಿಸಲು 2 ಕೋಟಿ ರೂ.ವರೆಗೂ ಸಾಲ ದೊರೆಯಲಿದೆ. ಬ್ಯಾಂಕ್ ಶೇ.9ರ ಬಡ್ಡಿ ವಿಧಿಸಿದರೆ ಇದರಲ್ಲಿ ಶೇ.3ರ ಬಡ್ಡಿಯನ್ನು ಕೇಂದ್ರ ಸರಕಾರವೇ ಭರಿಸಲಿದೆ. ಆಸಕ್ತರು agriinfa.dac.gov.in ಈ ಆನ್‌ಲೈನ್‌ನಲ್ಲಿ ನೋಂದಣಿ ಮಾಡಬೇಕು.



ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಬಹುಪಯೋಗಿ ಸಹಕಾರ ಸಂಘಗಳು, ಮಾರುಕಟ್ಟೆ ಸಹಕಾರಿ ಸಂಘಗಳು, ರೈತ ಉತ್ಪಾದಕ ಸಂಘಗಳು, ಕೃಷಿ ಉದ್ಯಮಿಗಳು, ಕೃಷಿ ಸ್ಟಾರ್ಟ್‌ಅಪ್, ಸ್ವ-ಸಹಾಯ ಸಂಘಗಳು, ಜಂಟಿ ಹೊಣೆಗಾರಿಕೆ ಗುಂಪುಗಳು, ಸರಕಾರ ಪ್ರಾಯೋಜಿತ ಪಿಪಿಪಿ ಯೋಜನೆಗಳು, ಖಾಸಗಿ ಸಂಸ್ಥೆಗಳು, ಕಂಪನಿಗಳು, ಪಾಲುದಾರಿಕೆ ಸಂಸ್ಥೆಗಳು ಸೇರಿ ಎಲ್ಲ ವ್ಯಾಪಾರ ಘಟಕಗಳು ಉದ್ದಿಮೆ ಸ್ಥಾಪಿಸಬಹುದಾಗಿದೆ.

- ಕೋಲ್ಡ್ ಸ್ಟೋರೇಜ್‌ಗೆ ಅವಕಾಶ
- ಕೃಷಿ ಮೂಲ ಸೌಕರ್ಯ ಅಭಿವೃದ್ಧಿಗೆ ನಿಧಿ ಸ್ಥಾಪನೆ
- ಕೃಷಿ ಸಹಕಾರಿ, ಸ್ತ್ರೀ ಶಕ್ತಿ ಸಂಘಗಳಿಗೆ ಅವಕಾಶ
- ಹಣಕಾಸು ಸಂಸ್ಥೆಗಳ ಜತೆ ಒಂದು ಲಕ್ಷ ಕೋಟಿ ರೂ.ಒಪ್ಪಂದ



ಸ್ಥಳೀಯ ಉತ್ಪನ್ನಗಳ ಮೌಲ್ಯವರ್ಧನೆಯಿಂದ ಸ್ಥಳೀಯ ಯುವ ಉದ್ಯಮಿಗಳ ಏಳಿಗೆ ಸಾಧ್ಯ. ಸ್ಥಳೀಯ ಉದ್ಯೋಗ ಹೆಚ್ಚಳಕ್ಕೂ ಪೂರಕ ವಾತಾವರಣ ಸೃಷ್ಟಿಯಾಗುತ್ತದೆ. ರೈತರ ಬದುಕು ಹಸನಾಗಲು, ಕೃಷಿ ವಿಶ್ವವಿದ್ಯಾಲಯಗಳ ಸಂಶೋಧನೆಗಳ ಲಾಭ ರೈತರಿಗೆ ದೊರೆಯಬೇಕು. ಕೃಷಿ ಆಧಾರಿತ ಉದ್ಯಮಗಳ ಸ್ಥಾಪನೆಗೆ ಸರಕಾರ ಹೆಚ್ಚಿನ ಮಹತ್ವ ನೀಡುತ್ತಿದೆ.

- ಬಿ.ಎಸ್.ಯಡಿಯೂರಪ್ಪ ಸಿಎಂ
(ಶಿವಮೊಗ್ಗದಲ್ಲಿ ಹೇಳಿದ್ದು)

ಸರಕಾರ ಒಂದು ಜಿಲ್ಲೆ, ಒಂದು ಬೆಳೆ ಘೋಷಿಸಿದ್ದು ದಾವಣಗೆರೆ ಜಿಲ್ಲೆಗೆ ಸಿರಿಧಾನ್ಯವನ್ನು ಜಿಲ್ಲೆಯ ಬೆಳೆಯಾಗಿ ಘೋಷಿಸಲಾಗಿದೆ. ಈ ಬೆಳೆ ಆಧರಿಸಿ ಆರಂಭಿಸುವ ಉದ್ದಿಮೆಗೆ ಶೇ.35ರಷ್ಟು ಸಬ್ಸಿಡಿಯನ್ನು ಗರಿಷ್ಠ 10 ಲಕ್ಷದವರೆಗಿನ ಹಣ ನೀಡಲಾಗುತ್ತದೆ. ಉದ್ದಿಮೆ ಸ್ಥಾಪನೆಗೆ ತಗುಲುವ ವೆಚ್ಚದಲ್ಲಿ ಶೇ.10ರಷ್ಟನ್ನು ಫಲಾನುಭವಿ ಭರಿಸಬೇಕು, ಶೇ.35ರಷ್ಟು ಸಬ್ಸಿಡಿ ನೀಡಲಿದ್ದು, ಉಳಿದ ಹಣವನ್ನು ಸಾಲದ ರೂಪದಲ್ಲಿ ನೀಡಲಾಗುತ್ತದೆ. ಕೃಷಿ ಇಲಾಖೆಯಿಂದ ಅನುಷ್ಠಾನಗೊಳ್ಳುವ ಈ ಯೋಜನೆಯನ್ನೂ ಆತ್ಮನಿರ್ಭರದಡಿ ಘೋಷಿಸಲಾಗಿದೆ.

ಕೃಷಿ ವಲಯಕ್ಕೆ ಬೇಕಾದ ಕೋಲ್ಡ್ ಸ್ಟೋರೇಜ್ ಸೇರಿ ಇನ್ನಿತರ ಸೌಲಭ್ಯಗಳನ್ನು ರೈತರೇ ಮಾಡಿಕೊಳ್ಳಬಹುದು. ಇಲಾಖೆಯಿಂದ ಆಸಕ್ತ ರೈತರು, ಸ್ತ್ರೀಶಕ್ತಿ ಸಂಘಗಳಿಗೆ ತರಬೇತಿ ನೀಡಲು ಯೋಜಿಸುತ್ತಿದ್ದೇವೆ.

- ಲಕ್ಷ್ಮೀಕಾಂತ್ ಬೊಮ್ಮನ್ನನವರ್ ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ